**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.**

ದಿನಾಂಕ 28 ನೇ ಜೂನ್ ಮಾಹೆ 2022 ನೇ ಇಸವಿ.

ಸಿ.ಸಿ. ನಂಃ **1400/2020**

ಎನ್. ನಿರಂಜನ್ ಶೆಟ್ಟಿ,
ಪ್ರಾಯಃ 35 ವರ್ಷಗಳು,
ತಂದೆಃ ಎನ್. ಭಾಸ್ಕರ ಶೆಟ್ಟಿ,
ವಾಸಃ ಅನಿರುದ್ಧ ಮನೆ,
ಕಲಾಯಿ ರಸ್ತೆ, ಬೆಳ್ಮಣ್ ಗ್ರಾಮ,
ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ. ... ಪಿರ್ಯಾದುದಾರರು

**- ವಿರುದ್ಧ -**

ಪುನೀತ್ ಕುಮಾರ್,
ಪ್ರಾಯ ಃ 32 ವರ್ಷಗಳು,
ತಂದೆ ಃ ಜನಾರ್ಧನ ಭಂಗೇರ,
ವಾಸ ಃ ಶ್ರೀದೇವಿಕೃಪಾ ಅಪಾರ್ಟ್ಮೆಂಟ್,
ಫಾರ್ಚೂನ್ ಹೆದ್ದಾರಿ ಹತ್ತಿರ,
ಅಲಂಗಾರ್, ಮಾರ್ಪಾಡಿ ಗ್ರಾಮ,
ಮೂಡಬಿದ್ರಿ ಅಂಚೆ, ಮೂಡಬಿದ್ರಿ ತಾಲೂಕು,
ದಕ್ಷಿಣಕನ್ನಡ ಜಿಲ್ಲೆ-574227. ... ಆರೋಪಿ

**ಆಪಾದನೆ**

ಆರೋಪಿಯಾದ ನೀವು ಪಿರ್ಯಾದಿದಾರರಿಂದ ಪಡೆದ ಸಾಲದ ಹಣದ ಮರುಪಾವತಿಯ ಸಲುವಾಗಿ ದಿನಾಂಕ **25.08.2020** ರಂದು ರೂ. **3,00,000/-** ಗಳಿಗೆ ಆಕ್ಸಿಸ್ ಬ್ಯಾಂಕ್, ಮೂಡಬಿದ್ರಿ ಶಾಖೆ, ಚೆಕ್ ಸಂಃ **011584** ನ್ನು ನೀಡಿದ್ದು, ಪಿರ್ಯಾದಿದಾರರು ಅದನ್ನು ನಗದೀಕರಿಸಲು ವಿಜಯ ಬ್ಯಾಂಕ್, ಬೆಳ್ಮಣ್ ಶಾಖೆಗೆ

ಹಾಜರುಪಡಿಸಿದ್ದು, ಆದರೆ ‘ Funds Insufficient ’ ಎಂಬ ವಿಷಯವನ್ನು ಸದರಿ ಬ್ಯಾಂಕಿನವರು ದಿಃ **03.09.2020** ರ ಹಿಂಬರಹದ ಮೂಲಕ ತಿಳಿಯಪಡಿಸಿದ್ದು, ಅದರಂತೆ ಪಿರ್ಯಾದಿದಾರರು ದಿಃ **28.09.2020** ರಂದು ವಕೀಲರ ಮೂಲಕ ನೋಟಿಸು ಜಾರಿ ಮಾಡಿ ಸದರಿ ಚೆಕ್ಕಿನ ಹಣವನ್ನು 15 ದಿನಗಳ ಒಳಗೆ ಮರುಪಾವತಿ ಮಾಡುವಂತೆ ಕೇಳಿಕೊಂಡಿದ್ದು, ಸದರಿ ನೋಟಿಸು ದಿಃ **03-10-2020** ರಂದು ನಿಮ್ಮಗೆ ತಲುಪಿದ್ದು ಆದರೆ ಇದುವರೆಗೆ ಚೆಕ್ಕಿನ ಬಾಬ್ತು ಹಣವನ್ನು ಪಿರ್ಯಾದಿದಾರರಿಗೆ ನೀಡಿರುವುದಿಲ್ಲ. ಆ ಮೂಲಕ ವರ್ಗಾವಣೀಯ ಲಿಖಿತಗಳ ಅಧಿನಿಯಮ ಕಲಂ 138 ಕೆಳಗೆ ಈ ನ್ಯಾಯಾಲಯದ ಸಂಜ್ಞೆಯೊಳಗೆ  ಬರುವಂತೆ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಪ್ರಶ್ನೆ 1ಃ ಮೇಲೆ ಹೇಳಿದ ಆರೋಪವನ್ನು ಕೇಳಿರುವಿರಾ?
ಉತ್ತರಃ

ಪ್ರಶ್ನೆ 2ಃ ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಬಯಸುತ್ತೀರೋ?
ಉತ್ತರಃ

(ಆರೋಪಿಗೆ ಮೇಲಿನ ಆಪಾದನೆಯನ್ನು ಓದಿ ಹೇಳಿ ವಿವರಿಸಿದ್ದು, ಅವರು ಅದನ್ನು ಸರಿಯಾಗಿ ತಿಳಿದುಕೊಂಡು ಉತ್ತರಿಸಿದ್ದಾರೆ ಎಂಬುದಾಗಿ ಈ ಮೂಲಕ ದೃಢೀಕರಿಸುತ್ತೇನೆ.)

2 ನೇ ಹೆ.ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ.,
ಕಾರ್ಕಳ. C/c